ವ್ಯರ್ಥ ಗುಂಪುಗಳು ಇಂತಹ ಖಾಲಿ ಕೊಡಗಳ ಹೊತ್ತು ಪವಿತ್ರ ಜಲ ತಂದಿದ್ದೀವಿ ಎಂದು ಅಸಾಹಿತ್ಯಿಕ, ಅನೈತಿಕ, ವಾಚಾಳಿತನ ರೂಢಿಸಿಕೊಂಡಿದ್ದಾರೆ. ಈಗ ತಾನೆ ಬರೆಯಲು ಆರಂಭಿಸಿರುವವರಿಗೆ ಕನಿಷ್ಠ ಕುವೆಂಪು, ಬೇಂದ್ರೆಯ ಕಾವ್ಯದ ಬೇರುಗಳೇ ಗೊತ್ತಿಲ್ಲ. ತೇಜಸ್ವಿ, ಲಂಕೇಶ್, ಅನಂತಮೂರ್ತಿ ಅವರ ಸೃಜನಶೀಲತೆಯ ಆಳಅಗಲಗಳೇ ಗೊತ್ತಿಲ್ಲ. ಸ್ಖಲನಸುಖದ ಕನಸಿನಂತೆ ಬರೆವ ಹಲವರನ್ನು ಕಂಡಿರುವೆ. ಲಯವಾಗಲೆಂದೇ ಬೆಳೆವ ಕಳೆಯಿಂದ ಭಾಷೆಯು ಜಡವಾಗುತ್ತದೆ. ಬಂಡಾಯದ ಅನೇಕ ಲೇಖಕ ಮಿತ್ರರು ಬಳಸುವ ಸಾಹಿತ್ಯದ ರೂಪಕಗಳ ಗಮನಿಸಿದರೆ ವಿಷಾದವಾಗುತ್ತದೆ. ಸೃಜನಶೀಲತೆಗೆ ತುಕ್ಕು ಹಿಡಿಯಬಾರದು. ಅದು ಯಾವತ್ತೂ ಹರಿತವಾಗಿ ಫಳಫಳನೆ ಮಿನುಗುತ್ತಿರಬೇಕು. ಅಂತಹ ಕತ್ತಿಯ ಮೊನೆಯನ್ನು ಪ್ರಭುತ್ವದ ಮುಖಕ್ಕೆ ಆಗಾಗ ತೋರುತ್ತಿರಬೇಕು. ಅಂಥದ್ದನ್ನು ಎಷ್ಟು ಜನ ಮಾಡುತ್ತಿದ್ದಾರೆ?

◆ **ದೇವನೂರ ಮಹಾದೇವರ ತರುವಾಯ ಕನ್ನಡ ಕಥನ ಕ್ರಮದ ಹೊಸ ಮಾದರಿಯೊಂದು ನಿಮ್ಮ ಕಥೆಗಳಲ್ಲಿದೆ. ದುರಂತ ಆರ್ದ್ರತೆ ಅದರ ಮುಖ್ಯ ಗುಣ. ಗದ್ಯದ ಜೊತೆಗಿನ ಈ ಪರಿಯ ಸಂಬಂಧ ಹೇಗೆ ಸಾಧ್ಯವಾಯಿತು?**



ಬರಹ ಎನ್ನುವುದೇ ನನಗೆ ತಾಯಿ. ತಾಯ ಮಮಕಾರದಿಂದ ನನ್ನ ಭಾಷೆಯು ಆರ್ದ್ರವಾಗಿದೆ. ನನ್ನ ತಂದೆ ಭಯಂಕರ ಕ್ರೂರಿ. ತಾಯಿಯನ್ನು ವಿನಾಕಾರಣ ಹೊಡೆದು ಹಿಂಸಿಸುತ್ತಿದ್ದ. ಆಗೆಲ್ಲಾ ನಾನು 'ಅಣ್ಣಾ, ಅಣ್ಣಾ ಅಕ್ಕನಿಗೆ ಹೊಡೆಯಬೇಡ' ಎಂದು ಅವನ ಬಲಿಷ್ಠ ಕಾಲುಗಳಿಗೆ ಜೋತುಬೀಳುತ್ತಿದ್ದೆ. ಆತ ಒದರಿ ನನ್ನ ತುಳಿದು ತಾಯಿಯ ಮುಡಿಯ ನುಲಿದಿಡಿದು ಚಚ್ಚಿ ಹಾಕುತ್ತಿದ್ದ. ಆ ದೀನ ಸ್ಥಿತಿಯಲ್ಲಿ ನನ್ನ ಸುಪ್ತ ಭಾಷೆಯು ಗಹನವಾದ ಏಕಾಂತವನ್ನೂ ಆರ್ದ್ರತೆಯ ಸಂಕಟವನ್ನೂ ತಲುಪಿತೇನೊ. ಭಾಷೆ ಎಂಬ ದುಃಖದಲ್ಲಿ ಮುಳುಗಿ ಗಳಗಳ ಅತ್ತು ನನ್ನ ನಾನೇ ಸಂತೈಸಿಕೊಂಡು ಬರೆದೆ. ಒಂದು ದಿನ ವಿಷಾದ ಹೆಪ್ಪುಗಟ್ಟಿದಾಗ ಕಥೆ ಬರೆಯಲು ಕೂತೆ. ತಂತಾನೆ ದುಃಖ ಅರಳಿ ಹೂ ಬಿಟ್ಟು ಕಥೆಯಾಗಿತ್ತು. ಆಗ ನಾನು ಮೈಸೂರಲ್ಲಿ ಓದುವ ಕಾಲಕ್ಕೆ ದೇವನೂರ ಮಹಾದೇವ ನಮ್ಮ ಹೋರಾಟಗಳಲ್ಲಿ ಕಾಣುತ್ತಿದ್ದರು. ಮಾತನ್ನೇನು ಆಡುತ್ತಿರಲಿಲ್ಲ. ಆಗ ನಾನು ಕ್ಯಾಂಪಸ್ಸಿನ ಗುಂಪಿನ ಅನಾಥ ಕವಿಯಾಗಿದ್ದೆ. ಅವರ ಜೊತೆ ಸಲಿಗೆ ಸಾಧ್ಯವಿರಲಿಲ್ಲ. ನನ್ನ ಸ್ವಭಾವದಲ್ಲಿ ಯಾರಾದರೂ ದೊಡ್ಡವರು ಎನಿಸಿಕೊಂಡವರಿಂದ ದೂರ ಉಳಿಯುವ ಗುಣ ದಟ್ಟವಾಗಿತ್ತು. ದೇವನೂರ ಮಹಾದೇವರನ್ನು ಅನುಸರಿಸುವುದು ಬಹಳ ಅಪಾಯಕಾರಿಯಾದ ದಾರಿಯಾಗಿತ್ತು. ಮಹಾದೇವ ಅವರ ಹಿಂದೆ ಹೋದವರೆಲ್ಲ ಅವರ ನೆರಳು ಮಾತ್ರವಾದರು. ಸಿದ್ಧಲಿಂಗಯ್ಯನವರನ್ನು ಅನುಕರಿಸಿದವರ ಪಾಡು ಕೂಡ ಅದೇ ಆಗಿಬಿಟ್ಟಿತ್ತು.

ನಾನು ನನ್ನ ಅಭಿವ್ಯಕ್ತಿಯನ್ನು ಹೆಚ್ಚಾಗಿ ಪಶ್ಚಿಮದ ಹಾಗು ಆಫ್ರಿಕಾದ ಹಾಗೂ ಕನ್ನಡದ ನವ್ಯ ಲೇಖಕರ ಅಭಿವ್ಯಕ್ತಿ ಕ್ರಮಗಳಿಂದ ರೂಪಿಸಿಕೊಂಡೆ. ಇದನ್ನೆಲ್ಲ ಹದವಾಗಿ ಬೆರೆಸಿಕೊಂಡು ತೀವ್ರವಾಗಿ ಬರೆಯಲಾರಂಭಿಸಿದೆ. ತೀವ್ರತೆಯಿಂದ ಉತ್ಕಟ ಸಂಕಟದಿಂದ ಬರೆವಾಗ ಸೃಜನಶೀಲತೆಯು ತಂತಾನೇ ಲೇಖಕನನ್ನೇ ಕರೆದುಕೊಂಡು ಎಲ್ಲೆಲ್ಲಿಯೋ ಹೊರಟುಹೋಗುತ್ತದೆ. ನಾನು ಹುಟ್ಟನಿಂದ